ನಿಯಮ 334ರ ಮೇರೆಗೆ

(1) ಮೂಡಿಗೆರೆ ತಾಲ್ಲೂಕು ಕಳಸ ಹೋಬಳಿ ಕಗ್ಗನಹಳ್ಳಿ ಗ್ರಾಮದ ಗಿರಿಜನರ ಮೇಲೆ ಅರಣ್ಯ ಇಲಾಖೆಯಿಂದ ದೌರ್ಜನ್ಯ.

ಶ್ರೀಮತಿ ಮೋಟಮ್ಮ (ಮೂಡಿಗೆರೆ):- ಮಾನ್ಯ ಅಧ್ಯಕ್ಷರೆ, ಮೂಡಿಗೆರೆ ತಾಲ್ಲೂಕಿನ ಕಳಸ ಹೋಬಳಿ ಕಗ್ಗನಹಳ್ಳಿ ಗ್ರಾಮದಲ್ಲಿ ಗಿರಿಜನರು ಹತ್ತಾರು ವರ್ಷಗಳಿಂದ ಕೃಷಿ, ಕೂಲಿ ಮಾಡಿಕೊಂಡು ವಾಸಿಸುತ್ತಿದ್ದಾಗ, ನವೆಂಬರ್ ತಿಂಗಳಲ್ಲಿ ಇದ್ದಕ್ಕಿದ್ದಂತೆ, ಅವರು ವಾಸಿಸುತ್ತಿದ್ದ ಜಾಗವನ್ನು ಅರಣ್ಯ ಇಲಾಖೆಯವರು ಧಾಳಿ ಮಾಡಿ, ಅವರು ಹಾಕಿದ್ದ ಗಿಡಗಳನ್ನು ಕಡಿದು ಹಾಕಿ, ಅವರ ಗುಡಿಸಲುಗಳಿಗೆ ಬೆಂಕಿಯನ್ನು ಹಾಕಿರುತ್ತಾರೆ, ಈ ಬಗ್ಗೆ ಯಾವ ಕ್ರಮ ತೆಗೆದುಕೊಂಡಿಲ್ಲ, ಮತ್ತು ಮರುವಸತಿ ಹಾಗೂ ಪರಿಹಾರ ಸಹ ಆಗಿಲ್ಲ. ಇದು ಬಹಳ ಶೋಚನೀಯ ಸಂಗತಿ ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳಬೇಕಾಗಿ ಆಗ್ರಹಪಡಿಸುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರ ಸಚಿವರು):- ಮಾನ್ಯ ಅಧ್ಯಕ್ಷರೆ, ಉತ್ತರವನ್ನು ತರಿಸಿಕೊಡುತ್ತೇವೆ.

ಶ್ರೀಮತಿ ಮೋಟಮ್ಮ:- ಮಾನ್ಯ ಅಧ್ಯಕ್ಷರೆ, 2-3 ಸಾರಿ ಹೀಗೆ ಆಗಿದೆ. ಈಗ 2-3 ದಿನಗಳ ಹಿಂದೆ ಈ ತರಹ ನಿಯಮ 334ರ ಕೆಳಗೆ ಜಿಲ್ಲಾ ಪರಿಷತ್ ಬಗ್ಗೆ ಪ್ರಸ್ತಾಪ ಮಾಡಿದೆ. ಆದಕ್ಕೂ ಸಹ ಉತ್ತರ ಬಂದಿಲ್ಲ. ಮತ್ತು ಈ ದಿನ ನಿಯಮ 334ರ ಕೆಳಗೆ ಪ್ರಸ್ತಾಪಿಸಿದ್ದೇವೆ. ಈ ವಿಷಯಕ್ಕೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಬರಬೇಕು. ಆದರೆ ಇದಕ್ಕೂ ಸಹ ಉತ್ತರ ಇಲ್ಲ. ಹಾಗಾದರೆ ನಾವು ಯಾವಾಗ ಉತ್ತರವನ್ನು ನಿರೀಕ್ಷೆ ಮಾಡಬಹುದು. ನಿಜವಾಗಿಯೂ ಇದು ಬಹಳ ಬೇಸರದ ಸಂಗತಿ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಈ ವಿಷಯವನ್ನು ಮುಖ್ಯಮಂತ್ರಿಗಳು ಗಮನಕ್ಕೆ ತಂದು ಆದಷ್ಟು ಬೇಗ ಉತ್ತರ ತರಿಸುತ್ತೇವೆ.

ಶ್ರೀಮತಿ ಮೋಟಮ್ಮ:- ನಾವು ಈ ವಿಷಯವನ್ನು ಪ್ರಸ್ತಾಪ ಮಾಡಿ ಸರ್ಕಾರದಿಂದ ಏನು ಉತ್ತರ ಸಿಕ್ಕಿಲ್ಲ ಎಂದು ಜನಗಳಿಗೆ ಹೇಳಬೇಕಾಗುತ್ತದೆ. ಅಧ್ಯಕ್ಷರೆ ಇದಕ್ಕೆ ನೀವು ನ್ಯಾಯ ಒದಗಿಸಬೇಕು.

ಅಧ್ಯಕ್ಷರು:- ನಿಮಗೆ ಉತ್ತರ ಕಳುಹಿಸಿಕೊಡುತ್ತಾರೆ.

ಶ್ರೀಮತಿ ಮೋಟಮ್ಮ:- ಉತ್ತರ ಯಾವಾಗ ಕಳುಹಿಸಿಕೊಡುತ್ತಾರೆ ಎನ್ನುವುದು ಬೇಕಲ್ಲ. ನಾನು ಕೊಶ್ಚನ್ ಬ್ರಾಂಚ್‌ಗೆ ಹೋಗಿ ಕೇಳಿಕೊಂಡು ಬಂದೆ. 2-3 ದಿನಗಳ ಹಿಂದೆ ನಾನು ಜಿಲ್ಲಾ ಪರಿಷತ್ತು ಬಗ್ಗೆ ಪ್ರಸ್ತಾಪ ಮಾಡಿದೆ. ಆದಕ್ಕೂ ಆನ್ವಯಿಸುತ್ತದೆ. ಏಕೆಂದರೆ, ಜಿಲ್ಲಾಪರಿಷತ್‌ನಲ್ಲಿ ಬಲ್ಬ್‌ಗಳನ್ನು ಮೈಸೂರು ಲ್ಯಾಂಪ್‌ನಲ್ಲೇ ಕೊಳ್ಳಬೇಕು ಎಂದು ಆದೇಶ ನೀಡಿದ್ದಾರೆ. ಆ ಬಲ್ಬ್ ಹಾಕಿದ ಒಂದು ತಿಂಗಳಲ್ಲಿ ಅದು ಉರಿದು ಹಾಳಾಗುತ್ತದೆ. ಹೀಗಿದ್ದರೂ ಮೈಸೂರು ಲ್ಯಾಂಪ್ ಬಲ್ಬ್‌ಗಳನ್ನೇ ತೆಗೆದುಕೊಳ್ಳಬೇಕೆಂದು ಏಕೆ ಹೇಳುತ್ತಾರೆ? ಸ್ಟ್ಯಾಂಡರ್ಡ್ ಬಲ್ಬ್‌ಗಳನ್ನು ಕೊಳ್ಳಲಿಕ್ಕೆ ಜಿಲ್ಲಾ ಪರಿಷತ್, ಮಂಡಲ್ ಪಂಚಾಯತ್‌ಗೆ ಆದೇಶ ನೀಡಬೇಕೆಂದು ಮಾನ್ಯ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳ ಬಳಿ ಪ್ರಸ್ತಾಪ ಮಾಡಿದೆ. ಅದಕ್ಕೆ ಇದಕ್ಕೂ ಉತ್ತರ ಕೊಟ್ಟಿಲ್ಲ. ಈಗ ಏನು ಮಾಡಬೇಕು.

ಅಧ್ಯಕ್ಷರು:- ಅದನ್ನು ಭರವಸೆ ಸಮಿತಿಗೆ ಕಳುಹಿಸಿಕೊಡುತ್ತೇವೆ.